ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ , ಶ್ರೀರಂಗಪಟ್ಟಣ

ಸಿಸಿ **2427-2021** **DW-2**

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ **22.05.2026**

ಪಾಟೀ ಸವಾಲುಃ ಫಿರ್ಯಾದಿ ಪರ ಶ್ರೀ ಸಿ ಎಲ್ ವಕೀಲರಿಂದಃ

1. ನಿಡಿ-3 ರಿಂದ 5 ದಲ್ಲಿ ತೋರಿಸಿರುವ ಆಸ್ತಿಗೆ ಸಂಬಂಧಿಸಿದಂತೆ ನನ್ನ ಮತ್ತು ಫಿರ್ಯಾದಿಯ ನಡುವೆ ಯಾವುದೇ ವ್ಯಾಜ್ಯಗಳು ನ್ಯಾಯಾಲಯದಲ್ಲಿ ನಡೆಯುತ್ತಿಲ್ಲ.

2. ನಿಡಿ-3 ರಿಂದ 5 ದಲ್ಲಿ ತೋರಿಸಿರುವ ಆಸ್ತಿಗೆ ಸಂಬಂಧಿಸಿದಂತೆ ಫಿರ್ಯಾದಿ ಯಾವತ್ತು ನಮಗೆ ತೊಂದರೆ ಪಡಿಸಿಲ್ಲ ಎಂದರೆ ಸರಿ.

3. ನಿಡಿ-6 ವೈದ್ಯಕೀಯ ದಾಖಲೆಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಂಬಂಧವಿರುತ್ತದೆ ಎಂದು ನುಡಿಯುತ್ತಾರೆ.

4. ಫಿರ್ಯಾದಿದಾರರ ಅಕ್ಕ ವಿನುತಾ ರವರು ಆರೋಪಿಯ ವಿರುದ್ದ ಸಿಸಿ ನಂಃ 685/2022 ರಲ್ಲಿ ಏನು ಆದೇಶ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನನ್ನ ಗಂಡ ಆರೋಪಿಯನ್ನು ಮಂಡ್ಯದ ಜೈಲಿನಲ್ಲಿ ಇರಿಸಿದ್ದರೂ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸಿಸಿ ನಂಃ 685/2022 ರಲ್ಲಿ ಶಿಕ್ಷೆ ಆಗಿ ಜೈಲಿಗೆ ಹೋಗಿದ್ದ ವಿಚಾರ ನನಗೆ ಗೊತ್ತಿದ್ದರೂ ಸಹಾ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸದರಿ ಆದೇಶದ ವಿರುದ್ದ ನನ್ನ ಗಂಡ ಆರೋಪಿ ಸಲ್ಲಿಸಿದ ಕ್ರಿಮಿನಲ್ ಆಫೀನಲ್ ನಂಃ 5040/2024 ಸಹಾ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ .

6. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದಂತೆ ನಿಪಿ-1 ಚೆಕ್ ಕಳವು ಆಗಿರುವ ಬಗ್ಗೆ ಈ ಪ್ರಕರಣದಲ್ಲಿ ನೋಟಿಸು ಬಂದ ನಂತರ ತಿಳಿದಿರುತ್ತದೆ. ನಂತರ ನಾನು ಪೋಲಿಸರ ಬಗ್ಗೆ ದೂರನ್ನು ಸಲ್ಲಿಸಿರುತ್ತೇನೆ. ನಾನು ಸದರಿ ದೂರನ್ನು 2002 ರಲ್ಲಿ ನೀಡಿರುತ್ತೇವೆ.

7. ಸದರಿ ದೂರಿಗೆ ಸಂಬಂಧಿಸಿದಂತೆ ಏನಾಗಿರುತ್ತದೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ.

8. ಫಿರ್ಯಾದಿಯಿಂದ ಪಡೆದ ಹಣದ ಮರುಪಾವತಿಗಾಗಿ ಆರೋಪಿ ನನ್ನ ಗಂಡ ನಿಪಿ-1 ಚೆಕ್ ನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ.

9. ಫಿರ್ಯಾದಿಯಿಂದ ಪಡೆದ ಹಣದ ಮರುಪಾವತಿಗಾಗಿ ಆರೋಪಿ ನನ್ನ ಗಂಡ ನಿಪಿ-1 ಚೆಕ್ ನ್ನು ನೀಡಿದ್ದರೂ ಸಹಾ ಸದರಿ ಹಣವನ್ನು ಮರುಪಾವತಿ ಮಾಡಲು ತಪ್ಪಿಸಿಕೊಳ್ಳಲು ನಾನು ನನ್ನ ಗಂಡ ಆರೋಪಿಯೊಂದಿಗೆ ಸೇರಿಕೊಂಡು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಫಿರ್ಯಾದಿಯೇ ನಿಪಿ-1 ಚೆಕ್ ನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

10. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಗಂಡ ಆರೋಪಿ ಸೇರಿ ಸೃಷ್ಟಿಸಿದ ವಿಚಾರಗಳಾಗಿರುತ್ತದೆ ಎಂದರೆ ಸರಿಯಲ್ಲ.

11. ಆರೋಪಿ ನನ್ನ ಗಂಡನಾಗಿರುವುದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**